4. ನಿಯಮ 69ರ ಮೇರೆಗೆ:

ವಿಷಯ: ಆಳಂದ ಸಕ್ಕರೆ ಕಾರ್ಖಾನೆಗೆ ಚುನಾವಣೆ ನಡೆಸುವ ಬಗ್ಗೆ.

+ಶ್ರೀ ಮಾಲೀಕಯ್ಯ ಏ. ಗುತ್ತೇದಾರ್ (ಅಫಜಲ್‌ಪುರ): ಮಾನ್ಯ ಅಧ್ಯಕ್ಷರೇ, ಆಳಂದ ಸಕ್ಕರೆ ಕಾರ್ಖಾನೆ ಏನಿದೆ ಅದರ ಚುನಾವಣೆ ಇಷ್ಟರಲ್ಲೇ ಆಗಬೇಕಾಗಿತ್ತು. ಸರ್ಕಾರ ಇನ್ನೂ ಅದರ ಬಗ್ಗೆ ಗಮನ ಹರಿಸಿಲ್ಲ. ನಮ್ಮ ಸರ್ಕಾರ ಹಿಂದೆ ಅಧಿಕಾರದಲ್ಲಿ ಇದ್ದಂತಹ ಸಂದರ್ಭದಲ್ಲಿ ಕೂಡ ಆಡಳಿತ ಮಂಡಳಿಯ ಅವಧಿ ಮುಗಿದ ಕೂಡಲೇ ಕಾರ್ಖಾನೆಯ ಬೈಲಾ ಪ್ರಕಾರ ಚುನಾವಣೆಯನ್ನು ಘೋಷಣೆ ಮಾಡಲಾಗಿತ್ತು. ಚುನಾವಣೆ ಕೂಡ ನಡೆದು ಶೇಕಡ 30ರಷ್ಟು ಮತದಾನ ಕೂಡ ಆಗಿತ್ತು. ಚುನಾವಣೆ ಸಂದರ್ಭದಲ್ಲಿ ಸ್ವಲ್ಪ ಗಲಾಟೆ ನಡೆದಿದ್ದರಿಂದ ಚುನಾವಣೆ ಮುಂದೂಡಲ್ಪಟ್ಟಿತು. ಡಿಸೆಂಬರ್‌ನಲ್ಲಿ ಕಾರ್ಖಾನೆ ಪ್ರಾರಂಭವಾಗುವುದರಲ್ಲಿ ಇದೆ. ಆದರೆ ಸರ್ಕಾರ ಅದರ ಆಡಳಿತ ಮಂಡಳಿಯನ್ನು ರಚನೆ ಮಾಡತಕ್ಕಂತಹ ಒಂದು ವಾತಾವರಣ ನಮಗೆ ಕಂಡು ಬರುತ್ತಿಲ್ಲ. ಈಗಾಗಲೇ ಸದರಿ ಕಾರ್ಖಾನೆ ಏಳೂವರೆ ಕೋಟಿ ರೂಪಾಯಿಗಳ ನಷ್ಟ ಅನುಭವಿಸುತ್ತಿದೆ. ಶ್ರೀಮಾನ್ ಸುಭಾಷ್ ಗುತ್ತೇದಾರ್‌ರವರು ಅದರ ಅಧ್ಯಕ್ಷರಾದ ಮೇಲೆ 5 ಕೋಟಿ ರೂಪಾಯಿಗಳ ಹಣ ಮರು ಪಾವತಿ ಆಗುವಂತೆ ಮಾಡಿದ್ದಾರೆ. ರೈತರಿಗೆ ಇನ್ನೂ 2 ಕೋಟಿ ರೂಪಾಯಿಗಳ ಬಾಕಿ ಹಣ ಕೊಡಬೇಕಾಗಿದೆ. ಇಂತಹ ಸಂದರ್ಭದಲ್ಲಿ ತಾವು ಆಡಳಿತ ಮಂಡಳಿಯನ್ನು ಹಾಕಿದರೆ ಬಹಳ ಕಷ್ಟವಾಗುತ್ತದೆ. ಏಕೆಂದರೆ ರೈತರು ಯಾರೂ ಕೂಡ ಮುಂದೆ ಬರಲಿಕ್ಕೆ ಸಾಧ್ಯವಿಲ್ಲ. ಮಾನ್ಯ ರೇವು ನಾಯಕ್‌ರವರ ಕ್ಷೇತ್ರ, ಮಾನ್ಯ ಸುಭಾಷ್ ಗುತ್ತೇದಾರ್‌ರವರ ಆಳಂದ ಕ್ಷೇತ್ರ ಮತ್ತು ಗುಲ್ಬರ್ಗಾ ಈ ಮೂರೂ ತಾಲ್ಲೂಕುಗಳಿಗೆ ಈ ಕಾರ್ಖಾನೆ ಸಂಬಂಧಪಟ್ಟಿದೆ. ಈ ಕಾರ್ಖಾನೆಯ ಚುನಾವಣೆ ಅತೀ ಜರೂರಾಗಿ ಆಗಬೇಕೆಂಬುದು ಇಲ್ಲಿಯ ರೈತರ ಬೇಡಿಕೆಯಾಗಿದೆ. ನಡೆಯುವ ಚುನಾವಣೆಯಲ್ಲಿ ರೈತರಿಂದ ಯಾರು ಬಹುಮತ ಪಡೆದು ಅಲ್ಲಿ ಅಧಿಕಾರವನ್ನು ವಹಿಸಿಕೊಳ್ಳುತ್ತಾರೋ ಅಂತಹವರ ಕೈಗೆ ಆಡಳಿತ ಮಂಡಳಿಯನ್ನು ಕೊಟ್ಟಾಗ ಕಾರ್ಖಾನೆ ಸುಗಮವಾಗಿ ನಡೆಯಲಿಕ್ಕೆ ಸಾಧ್ಯವಾಗುತ್ತದೆ. ಸದನದಲ್ಲಿ ಹಾಜರಿರುವ ಮಾನ್ಯ ಸಭಾ ನಾಯಕರು ಈ ಸಂದರ್ಭದಲ್ಲಿ ಆ ಕಾರ್ಖಾನೆಗೆ ಚುನಾವಣೆ ನಡೆಸುವ ಬಗ್ಗೆ ಕೂಡಲೇ ಘೋಷಣೆ ಮಾಡತಕ್ಕ ಉತ್ತರವನ್ನು ಕೊಡುತ್ತಾರೆಯೇ? ಎಂದು ನಾನು ತಮ್ಮ ಮೂಲಕ ಅವರನ್ನು ಕೇಳುತ್ತಿದ್ದೇನೆ. ದಯವಿಟ್ಟು ಮಾನ್ಯ ಮುಖ್ಯಮಂತ್ರಿಗಳು ಇದಕ್ಕೆ ಉತ್ತರಿಸಿದರೆ ಒಳ್ಳೆಯದು. ಮಾನ್ಯ ಖರ್ಗೆಯವರಿಗೆ ಇದರ ಬಗ್ಗೆ ಎಲ್ಲಾ ವಿಚಾರ ಗೊತ್ತಿದೆ. ಮಾನ್ಯ ಸಹಕಾರ ಸಚಿವರು ಇಲ್ಲಿ ಇದ್ದರೂ ಕೂಡ ಮಾನ್ಯ ಮುಖ್ಯಮಂತ್ರಿಗಳೇ ಈ ಬಗ್ಗೆ ಉತ್ತರ ಕೊಟ್ಟರೆ ಒಳ್ಳೆಯದು. ಈ ಬಗ್ಗೆ ಮಾನ್ಯ ಸುಭಾಷ್ ಗುತ್ತೇದಾರ್‌ರವರೂ ಕೂಡ ಒಂದೆರಡು ಮಾತುಗಳನ್ನಾಡಲು ತಾವು ಅವಕಾಶ ಮಾಡಿಕೊಡಬೇಕು.

+ಶ್ರೀ ಸುಭಾಷ್ ಏ. ಗುತ್ತೇದಾರ್: ಮಾನ್ಯ ಅಧ್ಯಕ್ಷರೇ, ಆಳಂದ ಸಕ್ಕರೆ ಕಾರ್ಖಾನೆ ಸುಮಾರು 10 ವರ್ಷಗಳಿಂದ ಕಾರ್ಯ ಮಾಡುತ್ತಾ ಬಂದಿದೆ. ಇದಕ್ಕೆ ಇಲ್ಲಿಯವರೆಗೆ ಚುನಾವಣೆಯನ್ನೇ ನಡೆಸಿಲ್ಲ. ಗುತ್ತೇದಾರ್ ಮನೆತನ ಇಲ್ಲಿ ಅಧಿಕಾರಕ್ಕೆ ಬರುತ್ತದೆ ಎಂದು ಅರ್ಥ

ಮಾಡಿಕೊಂಡು ಮಾನ್ಯ ವಿರೋಧಪಕ್ಷದ ನಾಯಕರು ಗಲಾಟೆ ಮಾಡಿ ಚುನಾವಣೆ ಅಧಿಕಾರಿಗೆ ಹೆದರಿಸಿ ಚುನಾವಣೆಯನ್ನು ಮುಂದೂಡಲಾಗಿದೆ. ಚುನಾವಣೆಯನ್ನು ಮುಂದೂಡಿದ ಮೇಲೆ ಇವತ್ತು ನವೆಂಬರ್ 30 ಬಂದರೆ ಆರು ತಿಂಗಳಾಗುತ್ತದೆ. ಇನ್ನುವರೆಗೆ ಆಡಳಿತಾಧಿಕಾರಿಗಳು ಅಲ್ಲಿ ಅಧಿಕಾರ ನಡೆಸಿಕೊಂಡು ಬಂದಿದ್ದಾರೆ. ಆಡಳಿತಾಧಿಕಾರಿಗಳು ಹಿಂದೆ 1994-95ರಲ್ಲಿ ಆ ಕಾರ್ಖಾನೆ ನಡೆಸಿದ್ದರು. ರೈತರ ಬಾಕಿ ಏಳುವರೆ ಕೋಟಿ ರೂಪಾಯಿಗಳು ಏನಿದೆ ಅದನ್ನು ಪಾವತಿ ಮಾಡಿಲ್ಲ. ಇವತ್ತು ತಮ್ಮ ಮೂಲಕ ಸರ್ಕಾರವನ್ನು ಕೇಳುತ್ತಿದ್ದೇನೆ, ಇವತ್ತು ಅಲ್ಲಿ ಚುನಾವಣೆ ಬೇಗನೆ ನಡೆಸಿ ರೈತರು ಯಾರ ಕೈಯಲ್ಲಿ ಆ ಕಾರ್ಖಾನೆ ಆಡಳಿತವನ್ನು ವಹಿಸಿ ಕೊಡುತ್ತಾರೆ ಅವರು ಅಧಿಕಾರ ನಡೆಸಿಕೊಂಡು ಹೋಗಬೇಕೆಂದು ಹೇಳಿ, ಚುನಾವಣೆ ಬೇಗ ಆಗಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಆ ಕಾರ್ಖಾನೆಯನ್ನು ಇನ್ನು ಪ್ರಾರಂಭ ಮಾಡಿಲ್ಲ. ಯಾವಾಗ ಪ್ರಾರಂಭ ಮಾಡುತ್ತಾರೆ? ಸುಮಾರು ಏಳು ಲಕ್ಷ 65,000 ಟನ್ ರೈತರ ಕಬ್ಬು ಅಲ್ಲಿ ಇದೆ. ಡಿಸೆಂಬರ್‌ನಲ್ಲಿ ಪ್ರಾರಂಭ ಮಾಡಿ ಮೇ ವರೆಗೆ ನಡೆಸಿದರೂ ಕೂಡ ಆರು ತಿಂಗಳ ಕಂಪ್ಲೀಟ್ ಸರಿಯಾಗಿ ನಡೆಸಿದರೂ ಕೂಡ ಇನ್ನೂ ಒಂದು ಲಕ್ಷ ಟನ್ ಕಬ್ಬು ಉಳಿಯುತ್ತದೆ. ಇದರ ಬಗ್ಗೆ ಸರ್ಕಾರ ಏನು ವಿಚಾರ ಮಾಡಿದೆ? ಅದೂ ಅಲ್ಲದೆ 1994-95 ರದು 2.20 ಲಕ್ಷ (ಎರಡು ಕೋಟಿ ಇಪ್ಪತ್ತು ಲಕ್ಷ) ರೈತರ ಹಣ ಇನ್ನು ಪಾವತಿ ಮಾಡುವುದಿದೆ. ಇದರ ಬಗ್ಗೆ ಸರ್ಕಾರ ಏನು ವಿಚಾರ ಮಾಡಿದೆ? ಆ ರೈತರು ಇವತ್ತು ಆಳಂದ ಸಕ್ಕರೆ ಕಾರ್ಖಾನೆಗೆ ಕಬ್ಬು ಹಾಕಬೇಕೆ ಅಥವ ಬೇಡವೇ ಎನ್ನುವ ಭಯದಲ್ಲಿದ್ದಾರೆ. ಹಾಗೆ ಹಾಕಿದರೆ ನಮಗೆ ದುಡ್ಡು ಬರುತ್ತದೆಯೋ, ಇಲ್ಲವೋ ಎನ್ನುವ ಆತಂಕದಲ್ಲಿದ್ದಾರೆ. 1994-95ರಲ್ಲಿ ಏಳುವರೆ ಕೋಟಿ ರೂಪಾಯಿಗಳಲ್ಲಿ ಈಗತಾನೆ ನಮ್ಮ ನಾಯಕರು ಹೇಳಿದ ಹಾಗೆ ಐದು ಕೋಟಿ, 40 ಲಕ್ಷ ರೂಪಾಯಿಗಳನ್ನು ನಾವು ಪೇಮೆಂಟ್ ಮಾಡಿದ್ದೇವೆ. ನಮ್ಮ ಸರ್ಕಾರ ಮಾನ್ಯ ದೇವೇಗೌಡರ ಕಾಲದಲ್ಲಿ ಮೂರು ಕೋಟಿ ರೂಪಾಯಿಗಳು ಮತ್ತು ಮಾನ್ಯ ಸಿದ್ದರಾಮಯ್ಯನವರು ಫೈನಾನ್ಸ್ ಮಿನಿಸ್ಟರ್ ಇದ್ದಾಗ ಪರ್ಚೇಸ್ ಟ್ಯಾಕ್ಸ್ ರಿಫಂಡ್ ಕೊಟ್ಟು 1994-95ರಲ್ಲಿ 2.40 ಕೋಟಿ ರೂಪಾಯಿಗಳನ್ನು ರೈತರ ಹಳೆಯ ಬಾಕಿ ಕೊಟ್ಟಿದ್ದೇವೆ. ಅದೇ ಪ್ರಕಾರ ಸನ್ಮಾನ್ಯ ಹಿರಿಯರಾದ ಖರ್ಗೆಯವರೂ ಕೂಡ ವಿರೋಧ ಪಕ್ಷದ ನಾಯಕರಾಗಿದ್ದಾಗ ರೈತರ ಹಣ ಪಾವತಿ ಮಾಡಬೇಕೆಂದು ಮೊದಲಿನ ಸರ್ಕಾರಕ್ಕೆ ಕೇಳಿಕೊಂಡಿದ್ದರು. ನಮ್ಮ ಕಾರ್ಖಾನೆ ಬಗ್ಗೆ ಅವರಿಗೆ ಮಾಹಿತಿ ಇದೆ. ರೈತರ ಸಮಸ್ಯೆ ಬಗೆಹರಿಸಬೇಕೆಂದು ಸರ್ಕಾರದಲ್ಲಿ ಕೇಳಿಕೊಂಡು ಆದಷ್ಟು ಬೇಗ ಅರ್ಧಕ್ಕೆ ನಿಂತ ಈ ಚುನಾವಣೆ ನಡೆಸಿ ಅಲ್ಲಿ ಆಡಳಿತ ಮಂಡಳಿ ಕೈಯಲ್ಲಿ ಅಧಿಕಾರ ಕೊಟ್ಟು ಕಾರ್ಖಾನೆ ನಡೆಸಬೇಕೆಂದು ತಮ್ಮ ಮುಖೇನ ಕೇಳಿಕೊಂಡು ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

+ಶ್ರೀ ರೇವು ನಾಯಕ್ ಬೆಳಮಗಿ (ಕಮಾಲಾಪುರ): ಸನ್ಮಾನ್ಯ ಅಧ್ಯಕ್ಷರೆ, ಈಗ ತಾನೆ ನಮ್ಮ ಹಿರಿಯ ಸದಸ್ಯರು ಏನು ಪ್ರಸ್ತಾಪ ಮಾಡಿದ್ದಾರೆ ಅದರ ಜೊತೆಯಲ್ಲಿ ನಾನು ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟ ಆಳಂದ ತಾಲ್ಲೂಕಿನಲ್ಲಿರುವ ಸಕ್ಕರೆ ಕಾರ್ಖಾನೆಗೆ ಚುನಾವಣೆ ನಡೆಸಲೇಬೇಕೆಂದು ನಮ್ಮ ಅಭಿಪ್ರಾಯ. ಆ ಫ್ಯಾಕ್ಟರಿ ವಿಷಯವನ್ನು ಮಾತನಾಡಬೇಕಾದರೆ ನಮಗೆ ಬಹಳ ದುಃಖವಾಗುತ್ತದೆ. ಹಿಂದಿನ ಸರ್ಕಾರ ನಾಮಿನೇಟ್ ಮಾಡಿ ಎಂತಹವರಿಗೆ ಮೆಂಬರ್ ಮಾಡಿದ್ದಾರೆಂದರೆ, ಹೋಟೆಲ್ ಮಾಲೀಕರು, ರೋಡ್‌ನಲ್ಲಿ ಓಡಾಡುವವರಿಗೆ ಸದಸ್ಯರನ್ನಾಗಿ

ಮಾಡಿ ಫ್ಯಾಕ್ಟರಿ ಪೂರ್ತಿ ಲೂಟಿಯಾಗಿದೆ. ಇನ್ನು ಈ ಚುನಾವಣೆ ಆಗಲೇಬೇಕು. 1994-95ನೇ ಸಾಲಿನ ಮರುಪಾವತಿ ಇದುವರೆಗೆ ಆಗಿಲ್ಲ. ಇಲ್ಲಿ ಕುಳಿತಿರುವಂತಹ ಎಲ್ಲ ಮಾನ್ಯ ಸಚಿವರಿರಲಿ, ಸರ್ಕಾರಿ ಅಧಿಕಾರಿಗಳಿರಲಿ, ತಿಂಗಳಿಗೊಮ್ಮೆ ಸಂಬಳ ತೆಗೆದುಕೊಳ್ಳುತ್ತಾರೆ. ರೈತ ಬೆಳೆದ ಕಬ್ಬಿಗೆ 12 ತಿಂಗಳಾದರೂ ಅವನ ಕೈಗೆ ಹಣ ಬಂದಿಲ್ಲ. ಎಷ್ಟೋ ಮಂದಿ ತಾಟಪೋಟಿ ಮಾಡಿಕೊಂಡರು, ಲಗ್ನ ಕೂಡ ನಿಂತಿದೆ. ಅಂತಹ ಪರಿಸ್ಥಿತಿಯಾಗಿದೆ. ಫ್ಯಾಕ್ಟರಿ ಎಲಕ್ಷನ್ ಆಗಲೇಬೇಕು. ನಾನು ಸರ್ಕಾರಕ್ಕೆ ಕಳಕಳಿಯ ವಿನಂತಿ ಮಾಡುತ್ತೇನೆ, ಈ ನಾಮಿನೇಷನ್ ಮತ್ತೆ ಯಾವಾಗಲೂ ಮಾಡಬಾರದು. ಒಮ್ಮೆ ನಾಮಿನೇಟ್ ಮಾಡಿದರೆ ನಿಮ್ಮ ಸರ್ಕಾರಕ್ಕೆ ಶಾಪ ಹತ್ತುತ್ತದೆ, ಅದನ್ನು ಮಾಡಬಾರದು ಎಂದು ಕಳಕಳಿಯ ವಿನಂತಿ ಮಾಡುತ್ತೇನೆ. ನಮ್ಮ ಮಾನ್ಯ ಖಿರ್ಗಿಯವರು ಹಿರಿಯ ಮುಖಂಡರಿದ್ದಾರೆ, ರಾಜಕೀಯ ಧುರೀಣರಿದ್ದಾರೆ. ಹಾಗೂ ಬುದ್ಧಿ ಜೀವಿಗಳು ಇದ್ದಾರೆ. ಅವರಿಗೆ ಈ ಫ್ಯಾಕ್ಟರಿ ಬಗ್ಗೆ ಏನಾಗಿದೆ ಎಂದು ಗೊತ್ತಿದೆ. ಈ ಮಾತನ್ನು ಏಕೆ ಹೇಳುತ್ತಿದ್ದೇನೆಂದರೆ, ಎರಡು ಲಕ್ಷ ರೂಪಾಯಿಗಳನ್ನು ಚೀಲಕ್ಕಾಗಿ ಖರ್ಚು ಮಾಡಿದ್ದಾರೆ. 20 ರೂಪಾಯಿಯಲ್ಲಿ ಒಂದು ಖಾಲಿ ಚೀಲ ಸಿಗುತ್ತದೆ. ಎಷ್ಟು ಹಣ ಲೂಟಿ ಆಗಿದೆ, ಇದು ಯಾರ ಹಣ, ರೈತರ ಹಣ. ಇಂತಹ ಅನ್ಯಾಯ ಹಿಂದೆ ಆಗಿದೆ. ನಮ್ಮ ಮಾನ್ಯ ಸುಭಾಷ್ ಗುತ್ತೇದಾರ್‌ರವರು ಎಸ್ಟಿಮೇಟ್ ಮಾಡಿರಬಹುದು. ಅಲ್ಲಿ ಅಧ್ಯಕ್ಷರಾಗಿ ಇವರೂ ಹಣ ಕೊಟ್ಟಿದ್ದಾರೆ. ಸದಸ್ಯರು ಬಹಳ ಹಾಳು ಮಾಡಿದರು. ಸದಸ್ಯರು ಒಂದು ಜೀಪ್ ತೆಗೆದುಕೊಂಡು ಹಸ್ಕಿ ಗ್ರಾಮಕ್ಕೆ ಹೋದರು, ಅದನ್ನು ನಾನು ಕಣ್ಣಿನಿಂದ ನೋಡಿದ್ದೇನೆ. ನಾನು ಎಮ್‌ಎಲ್‌ಎ ಆಗಿದ್ದರಿಂದ ನಾನೂ ಆ ಮೀಟಿಂಗ್‌ಗೆ ಹೋಗಬೇಕು, ನನ್ನನ್ನು ಮೆಂಬರ್ ಸಹ ಮಾಡಲಿಲ್ಲ. ಹಿಂದೆ ಎಲ್ಲ ಒಡೆತನದವರು ಮೆಂಬರ್ ಇದ್ದರು, ಶರಾಬು ಮಾಡುವವರೂ ಮೆಂಬರ್ ಇದ್ದರು. ನಾನು ಎಮ್‌ಎಲ್‌ಎ ಆದರೂ ಸಹ ನನ್ನನ್ನು ಸದಸ್ಯನಾಗಿ ಮಾಡಲಿಲ್ಲ. ನಾನು ಇದನ್ನು ಬಹಳ ನೊಂದು ಹೇಳುತ್ತಿದ್ದೇನೆ. ಅಲ್ಲಿ ಫ್ಯಾಕ್ಟರಿ ಎಲೆಕ್ಷನ್ ಆಗಲೇಬೇಕು. ರೈತರಿಗೆ ನ್ಯಾಯ ಸಿಗಬೇಕು. ಏಕೆಂದರೆ ಫ್ಯಾಕ್ಟರಿಗೆ ನೀವು ನಾಮಿನೇಟ್ ಮಾಡಲೇಬಾರದು. ಮಾನ್ಯ ಎ.ಬಿ. ಪಾಟೀಲ್ ಅವರು ನಮ್ಮ ಹಿರಿಯ ನಾಯಕರು, ಅವರು ಒಳ್ಳೆಯ ಕೆಲಸ ಮಾಡಿದ್ದಾರೆ, ಈಗ ರೈತರು ಮಾನ್ಯ ಎ.ಬಿ. ಪಾಟೀಲ್‌ರಿಗೆ ಬೈಯುತ್ತಿದ್ದಾರೆ. ಅವರು ನಮಗೆ ಏನು ಮಾಡಿದರು, ನಮ್ಮದು ಎಲ್ಲ ಸತ್ಯನಾಶ ಆಯಿತು ಎಂದು ಕಬ್ಬು ಬೆಳೆಗಾರರು ಬಹಳ ಜನ ಇದ್ದಾರೆ, ಮಳೆ ಚೆನ್ನಾಗಿ ಆಗಿದೆ. ಆದಷ್ಟು ಬೇಗ ಫ್ಯಾಕ್ಟರಿ ಚಾಲನೆ ಮಾಡಬೇಕೆಂದು ಸರ್ಕಾರಕ್ಕೆ ನಾನು ಕಳಕಳಿ ವಿನಂತಿ ಮಾಡುತ್ತೇನೆ, ಫ್ಯಾಕ್ಟರಿ ಚಾಲನೆ ಮಾಡದೆ ಇದ್ದರೆ ಪರಿಸ್ಥಿತಿ ಬಹಳ ಹಾಳಾಗುತ್ತದೆ. ಒಂದು ವೇಳೆ ನೀವು ಚುನಾವಣೆ ಮಾಡದೆ ಮೆಂಬರ್‌ನ್ನು ನಾಮಿನೇಟ್ ಮಾಡಿದರೆ ಅದು ಲೂಟಿಯಾಗುತ್ತದೆ. ಇದು ನನಗೆ ಗೊತ್ತಿದೆ. ಆದಷ್ಟು ಬೇಗ ಫ್ಯಾಕ್ಟರಿ ಚಾಲನೆ ಮಾಡಲೇಬೇಕೆಂದು ನಾನು ಕಳಕಳಿಯ ಮನವಿ ಮಾಡಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಡಿ.ಕೆ. ಶಿವಕುಮಾರ್ (ಮಾನ್ಯ ಸಹಕಾರ ಸಚಿವರು): ಮಾನ್ಯ ಅಧ್ಯಕ್ಷರು, ಮಾನ್ಯ ಮಾಲೀಕಯ್ಯ ಗುತ್ತೇದಾರ್‌ರವರು ಮಾನ್ಯ ಸುಭಾಷ್ ಗುತ್ತೇದಾರ್‌ರವರು ಮತ್ತು ಸ್ನೇಹಿತರು ಈ ಆಳಂದ ಸಕ್ಕರೆ ಕಾರ್ಖಾನೆ ಚುನಾವಣೆ ನಡೆಸುವ ಬಗ್ಗೆ ಆದೇಶ ಹೊರಡಿಸಬೇಕು, ಸಾರ್ವಜನಿಕರಿಗೆ ಬಹಳ ತೊಂದರೆಯಾಗುತ್ತಿದೆ ಎನ್ನುವ ವಿಚಾರವನ್ನು ನಿಯಮ 69ರ ಅಡಿಯಲ್ಲಿ

ಪ್ರಸ್ತಾಪ ಮಾಡಿದ್ದಾರೆ. ಸರ್ಕಾರ ಇದಕ್ಕೆ ಚುನಾವಣೆ ಮಾಡಲೇಬೇಕೆಂದು ಇಲ್ಲಿ ಹಿಂದಿನ ಸರ್ಕಾರ ಕೂಡ ತೀರ್ಮಾನ ಮಾಡಿದೆ. ಮಾನ್ಯ ಸುಭಾಷ್‌ರವರು, ಮಾನ್ಯ ಗುತ್ತೇದಾರ್ ಸಾಹೇಬರು ಮಂತ್ರಿಯಾಗಿದ್ದರು. ಅವರ ಕಾಲದಲ್ಲಿ ಈ ಒಂದು ನಾಮಿನೇಷನ್ ಮಾಡಿದ್ದರು.

ಶ್ರೀ ಮಾಲೀಕಯ್ಯ ಏ. ಗುತ್ತೇದಾರ್: ನಾಮಿನೇಷನ್ ಆದ ಮೇಲೆ ಬೈಲಾಸ್ ಪ್ರಕಾರ ಎಲೆಕ್ಷನ್ ಮಾಡಬೇಕಾದ ಪರಿಸ್ಥಿತಿ ಬಂದಾಗ ಎಲೆಕ್ಷನ್ ಮಾಡುವುದಕ್ಕೆ ಅನೌನ್ಸ್ ಆಗಿದೆ, ಎಲೆಕ್ಷನ್ ಆಗಿದೆ, 30 ಪರ್ಸೆಂಟ್ ಓಟಿಂಗ್ ಕೂಡ ಆಗಿದೆ, ಗಲಾಟೆಯಾಗಿ ಮುಂದೂಡಲ್ಪಟ್ಟಿದೆ.

ಶ್ರೀ ಡಿ.ಕೆ. ಶಿವಕುಮಾರ್: ಹೊಸ ಕಾನೂನು ಬಂದ ಮೇಲೆ ಚುನಾವಣೆ ಮಾಡಬೇಕೆಂದು ತೀರ್ಮಾನವಾಗಿದ್ದು ನಿಜ. ಅಲ್ಲಿ ಎಲೆಕ್ಷನ್ ಮಾಡುವುದಕ್ಕೆ ಹೊರಟಂತಹ ಸಂದರ್ಭದಲ್ಲಿ ಚುನಾವಣೆ ನಡೆಯುವಾಗ ಲಾ ಅಂಡ್ ಆರ್ಡರ್ ಪ್ರಾಬ್ಲಮ್ ಆಗಿದ್ದು, ತಾವು ಒಪ್ಪಿಕೊಳ್ಳುತ್ತೀರಿ. ಅಲ್ಲಿ ಲಾ ಅಂಡ್ ಆರ್ಡರ್ ಪ್ರಾಬ್ಲಮ್ ಆಗಿದೆ, ಗಲಾಟೆಯಾಗಿದೆ, ಹೊಡೆದಾಟವಾಗಿದೆ.

ಶ್ರೀ ಮಾಲೀಕಯ್ಯ ಏ. ಗುತ್ತೇದಾರ್: ಮಾನ್ಯ ಅಧ್ಯಕ್ಷರೆ ಅಲ್ಲಿ ಲಾ ಅಂಡ್ ಆರ್ಡರ್ ಪ್ರಾಬ್ಲಮ್ ಏನೂ ಆಗಿಲ್ಲ. ಉದ್ದೇಶ ಪೂರ್ವಕವಾಗಿ ಅಧಿಕಾರಿಗಳು ಶಾಮೀಲಾಗಿ ಚುನಾವಣೆ ಮುಂದೂಡ್ಪಟ್ಟಿದೆ. ಅಧಿಕಾರಿಗಳಿಂದ ಆಗಿರುವ ಘಟನೆ ಬಗ್ಗೆ ಹೇಳುತ್ತಿದ್ದೇನೆ. ಇಲ್ಲಿ ನಮ್ಮ ಸರ್ಕಾರ, ನಿಮ್ಮ ಸರ್ಕಾರ ಎನ್ನುವ ಪ್ರಶ್ನೆ ಬರುವುದಿಲ್ಲ. ಆ ಕಾರ್ಯಾನೆ ಚುನಾವಣೆ ಆಗಿ ಆಡಳಿತ ಮಂಡಳಿ ಬರುತ್ತಾ ಇತ್ತು. ಅಲ್ಲಿ ಆಡಳಿತ ಮಂಡಳಿ ಸದಸ್ಯರು ಆ ಕಾರ್ಯಾನೆ ನಡೆಸುವ ಜವಾಬ್ದಾರಿ ಹೊತ್ತುಕೊಳ್ಳುತ್ತಾ ಇದ್ದರು. ಇವತ್ತು ಒಬ್ಬ ಅಧಿಕಾರಿಯಿಂದ ಸುಮ್ಮನೆ ವಿನಾಕಾರಣ ಅಂತಹ ಘಟನೆ ಆಗದೆ ಇರುವ ಸಂದರ್ಭದಲ್ಲಿ ಕೂಡ ತಾವು ಪೊಲೀಸ್ ರಿಪೋರ್ಟ್ ತರಿಸಿಕೊಂಡು ನೋಡಿ. ಎಕ್ಸ್‌ಪಿಎಲ್ ರೆಕಾರ್ಡ್ ಇದೆ. ಅಂತಹ ವಾತಾವರಣ ಏನೂ ಇರಲಿಲ್ಲ. ಉದ್ದೇಶ ಪೂರ್ವಕವಾಗಿ ಈ ಚುನಾವಣೆಯಲ್ಲಿ ಸುಭಾಷ್ ಗುತ್ತೇದಾರ್ ಫ್ಯಾನಲ್ ಬರುತ್ತದೆ ಎಂದು ಚುನಾವಣೆ ಮುಂದೂಡುವ ಒತ್ತಡವನ್ನು ಅಧಿಕಾರಿಗಳ ಮೇಲೆ ತಂದು ಅಧಿಕಾರಿಗಳು ಮತ್ತು ವಿರೋಧ ಪಕ್ಷದ ಸದಸ್ಯರು ಶಾಮೀಲಾಗಿ ಈ ಕೆಲಸ ಮಾಡಿದ್ದಾರೆ. ಬೈಲಾಸ್ ಪ್ರಕಾರ ಚುನಾವಣೆ ಮಾಡಲೇಬೇಕಾಗಿದೆ. ತಾವು ಚುನಾವಣೆ ಯಾವಾಗ ಘೋಷಣೆ ಮಾಡುತ್ತೀರಿ ಎಂದು ನಾವು ಕೇಳುತ್ತಿದ್ದೇವೆ.

ಶ್ರೀ ಸುಭಾಷ್ ಗುತ್ತೇದಾರ್: ಗಲಾಟೆ ಆಗುತ್ತದೆ ಎಂದು ಚುನಾವಣೆ ಮುಂದಕ್ಕೆ ಹಾಕುತ್ತೀರಾ ?

ಶ್ರೀ ಡಿ.ಕೆ. ಶಿವಕುಮಾರ್: ಕಾನೂನು ವ್ಯವಸ್ಥೆ ಅವ್ಯವಸ್ಥೆ ಆಗಿ ಗಲಾಟೆ ಆಗಿದ್ದರಿಂದ ಅಡ್ಮಿನಿಸ್ಟ್ರೇಟರ್ ನೇಮಕವಾಗಿದ್ದಾರೆ. ಅದನ್ನು ತಾವು ಒಪ್ಪುತ್ತೀರಿ. ಚುನಾವಣೆ ಆಗಬೇಕು, ಚುನಾವಣೆ ಮಾಡುವುದಕ್ಕೆ ನಾವು ತಯಾರಿದ್ದೇವೆ. ಯಾವಾಗ ಮಾಡಬೇಕು, ಯಾವ ಸಂದರ್ಭದಲ್ಲಿ ಮಾಡಬೇಕೆಂದು ನಾವು ನೋಡಬೇಕು. ಅಲ್ಲಿ ಲೂಟಿಯಾಗಿದೆ, ಹೆಚ್ಚು ಕಡಿಮೆಯಾಗಿದೆ ಎಂದು ತಿಳಿಸಿದ್ದಾರೆ, ತನಿಖೆ ನಡೆಯುತ್ತಿದೆ, ಸ್ಥಳೀಯ ಜೆಆರ್‌ಪಿಎಸ್ ರಿಪೋರ್ಟ್ ಕಳುಹಿಸಿದ್ದಾರೆ,

ಸೂಕ್ತವಾದ ಪರಿಸ್ಥಿತಿ ಮತ್ತು ಒಳ್ಳೆಯ ವಾತಾವರಣ ನಿರ್ಮಾಣ ಮಾಡಿ ರೈತರಿಗೆ ಸರಿಯಾದ ಐಡೆಂಟಿಟಿ ಕಾರ್ಡ್ ಎಲ್ಲಾ ಕೊಟ್ಟು ಶಾಂತ ರೀತಿಯಿಂದ ತಮ್ಮೆಲ್ಲರ ಸಹಕಾರದಿಂದ ಆದಷ್ಟು ಬೇಗ ನಾವು ಚುನಾವಣೆ ಮಾಡುತ್ತೇವೆ.

12.40 ಪಿ.ಎಂ

ಶ್ರೀ ಮಾಲೀಕಯ್ಯ ಏ. ಗುತ್ತೇದಾರ್: ಶ್ರೀಘ್ರವಾಗಿ ಆ ಕಾರ್ಖಾನೆ ಪ್ರಾರಂಭವಾಗಬೇಕಾಗಿದೆ. ಆದಷ್ಟು ಬೇಗನೆ ಎಂದರೆ, ಅದಕ್ಕೆ ಒಂದು ಕಾಲದ ಇತಿ ಮಿತಿ ಹೇಳಿ. ಮಾನ್ಯ ಅಧ್ಯಕ್ಷರೇ, ಆದಷ್ಟು ಬೇಗನೇ ಚುನಾವಣೆ ಮಾಡುತ್ತೇವೆ ಎಂದು ಮಾತ್ರ ಮಾನ್ಯ ಮಂತ್ರಿಗಳು ಹೇಳುತ್ತಿದ್ದಾರೆ. ಆದಷ್ಟು ಬೇಗನೇ ಎಂದರೆ ಯಾವಾಗ ಎಂಬುದನ್ನು ಹೇಳದಿರುವುದರಿಂದ ನಮಗೆ ಸಮರ್ಪಕ ಉತ್ತರ ಸಿಕ್ಕಂತಾಗುತ್ತಿಲ್ಲ.

ಶ್ರೀ ವಿ. ಕೃಷ್ಣಪ್ಪ: ಚುನಾವಣೆ ಮಾಡಬೇಕೆಂದು ವರದಿ ಕೊಟ್ಟ ನಂತರವೂ ಇನ್ನೂ ಚುನಾವಣೆಯನ್ನು ಅಲ್ಲಿ ಮಾಡಿಲ್ಲ.

ಶ್ರೀ ಮಾಲೀಕಯ್ಯ ಏ. ಗುತ್ತೇದಾರ್: ಮಾನ್ಯ ಕೃಷ್ಣಪ್ಪನವರೆ, ಚುನಾವಣೆ ಮಾಡಬೇಕೆನ್ನುವ ಸಂಬಂಧದ ವರದಿ ಈಗಾಗಲೇ ಬಂದಿದ್ದು ಚುನಾವಣೆ ಮಾಡಬೇಕೆನ್ನುವ ಶಿಫಾರಸ್ಸು ಸರ್ಕಾರಕ್ಕೆ ಬಂದಿದೆ. ಸರ್ಕಾರದಿಂದ ಆದೇಶಕ್ಕಾಗಿ ಮಾತ್ರ ಅಧಿಕಾರಿಗಳು ಕಾಯುತ್ತಿದ್ದಾರಷ್ಟೆ.

ಶ್ರೀ ಡಿ.ಕೆ. ಶಿವಕುಮಾರ್ (ಮಾನ್ಯ ಸಹಕಾರ ಸಚಿವರು): ಕೇವಲ ಅಷ್ಟಿದ್ದರೆ ಸಾಕೆ. ಗುರುತಿನ ಚೀಟಿಯನ್ನು ಮಾಡಿಸಬೇಡವೆ? ಭಾವಚಿತ್ರಗಳು ಇದಕ್ಕೆ ಬೇಡವೆ?

ಶ್ರೀ ಮಾಲೀಕಯ್ಯ ಏ. ಗುತ್ತೇದಾರ್: ಕೇವಲ ಭಾವಚಿತ್ರಗಳು ಇಲ್ಲವೆಂದು ಇದಕ್ಕಾಗಿಯೇ ಚುನಾವಣೆಯನ್ನು ಮುಂದೂಡುವುದಕ್ಕೆ ಆಗುತ್ತದೆಯೆ? ಕೇವಲ ಈ ಕಾರಣವೊಂದರಿಂದಲೇ ಕಾರ್ಖಾನೆಯನ್ನು ಪ್ರಾರಂಭ ಮಾಡದೇ ನಿಲ್ಲಿಸುವುದಕ್ಕಾಗುತ್ತದೆಯೇ? ಈ ರೀತಿಯ ಉತ್ತರಗಳನ್ನು ಕೊಟ್ಟರೆ ನಮಗೆ ಅದು ಸರಿ ಕಾಣುವುದಿಲ್ಲ. ಆದುದರಿಂದ ನಿರ್ದಿಷ್ಟವಾಗಿ ಯಾವಾಗ ಚುನಾವಣೆಯನ್ನು ಮಾಡುತ್ತಾರೆ ಎಂಬುದರ ಬಗ್ಗೆ ಹೇಳಬೇಕು.

ಅಧ್ಯಕ್ಷರು: ಚುನಾವಣಾ ದಿನಾಂಕವನ್ನು ನಿಗಧಿ ಮಾಡುವುದಕ್ಕಾದರೂ ನೀವು ಮಂತ್ರಿಗಳಿಗೆ ಸ್ವಲ್ಪ ಸಮಯ ಕೊಡಬೇಕು. ನೀವು ಅವರಿಗೆ ಒಂದು ವಾರವಾದರೂ ಸಮಯ ಕೊಡಿ, ಮಾಡುತ್ತಾರೆ. ಅವರು ಈ ಸಂಬಂಧ ನಿರ್ಧಾರ ತೆಗೆದುಕೊಳ್ಳುತ್ತಾರೆ.

ಶ್ರೀ ಮಾಲೀಕಯ್ಯ ಏ. ಗುತ್ತೇದಾರ್: ಮಾನ್ಯ ಅಧ್ಯಕ್ಷರೆ, ನವೆಂಬರ್ 15ನೇ ತಾರೀಖಿನೊಳಗೆ ವ್ಯವಸ್ಥಾಪಕ ಮಂಡಳಿಯವರು ಚುನಾವಣೆಯನ್ನು ಮಾಡುತ್ತೇವೆ ಎಂದು ಘೋಷಣೆ ಮಾಡಿದ್ದರೂ ಕೂಡ ಈ ಸರ್ಕಾರ ಇನ್ನೂ ಈ ಸಂಬಂಧ ಆಜ್ಞೆಯನ್ನು ಹೊರಡಿಸಿಲ್ಲ.

ಅಧ್ಯಕ್ಷರು: ನೀವು ಇದನ್ನು ತುರ್ತು ವಿಷಯ ಎಂದು ಸದನದಲ್ಲಿ ಎತ್ತಿದ್ದೀರಿ. ಈಗ ಮಾನ್ಯ ಮಂತ್ರಿಗಳಿಗೆ ಆ ವಿಚಾರವನ್ನು ಬಿಡೋಣ. ಮಾನ್ಯ ಮಂತ್ರಿಗಳು ಈಗಾಗಲೇ ಉತ್ತರಿಸಿ ಆದಷ್ಟು ಬೇಗನೇ ಚುನಾವಣೆಯನ್ನು ಮಾಡುತ್ತೇವೆ ಎಂದಿದ್ದಾರೆ. ಆದುದರಿಂದ ಇಲ್ಲಿಗೆ ಆ ವಿಚಾರವನ್ನು ಬಿಡೋಣ.

ಶ್ರೀ ರೇವುನಾಯಕ್ ಬೆಳಮಗಿ: ಮಾನ್ಯ ಅಧ್ಯಕ್ಷರೆ, ಅಲ್ಲಿ ಚುನಾವಣೆ ಆಗಲೇಬೇಕು. ನೀವು ನಾಮಿನೇಟ್ ಸದಸ್ಯರನ್ನು ಮಾಡಬಾರದು. ಇದೆಲ್ಲಕ್ಕಿಂತ ಮೊದಲು ಅಲ್ಲಿ ಕಾರ್ಖಾನೆ ಬೇಗನೇ ಚಾಲು ಆಗಬೇಕು. ಆದುದರಿಂದ ಕಾರ್ಖಾನೆಯನ್ನು ಯಾವಾಗ ಚಾಲನೆ ಮಾಡುತ್ತೀರಿ ಎಂಬುದು ಮೊದಲನೆಯ ವಿಷಯ. ಎರಡನೆಯದಾಗಿ ಮೆಂಬರ್‌ನ್ನು ನಾಮಿನೇಟ್ ಮಾಡುವುದಿಲ್ಲ ಎಂದು ಸರ್ಕಾರ ಹೇಳಬೇಕು. ಮೂರನೆಯದಾಗಿ ಚುನಾವಣೆಯನ್ನು ಯಾವಾಗ ಮಾಡುತ್ತಾರೆ ಎಂಬ ಬಗ್ಗೆ ಕೂಡ ನಿರ್ದಿಷ್ಟವಾಗಿ ಹೇಳಬೇಕು.

ಅಧ್ಯಕ್ಷರು: ಆ ವಿಷಯವನ್ನು ಸರ್ಕಾರಕ್ಕೆ ಬಿಡಿ. ಈಗಾಗಲೇ ಅದರ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರಿಸಿ ಆದಷ್ಟು ಬೇಗ ಮಾಡುತ್ತೇವೆ ಎಂದಿದ್ದಾರೆ.

ಶ್ರೀ ರೇವುನಾಯಕ್ ಬೆಳಮಗಿ: ನಾನು ಖಡಾಖಂಡಿತವಾಗಿ ಹೇಳುತ್ತಿದ್ದೇನೆ, ನೀವು ಅಲ್ಲಿಗೆ ನಾಮಿನೇಟ್ ಮೆಂಬರ್‌ನ್ನು ಮಾಡಬಾರದು. ಏಕೆಂದರೆ ಅಲ್ಲಿ ಈಗಾಗಲೇ ಹಣ ಲೂಟಿಯಾಗಿದೆ. ನೀವು ಒಂದು ವೇಳೆ ನಾಮಿನೇಟ್ ಮಾಡಿದರೆ ರೈತರು ನಿಮಗೆ ಶಾಪ ಹಾಕುತ್ತಾರೆ. ಮೊದಲು ನೀವು ಕಾರ್ಖಾನೆಯನ್ನು ಯಾವಾಗ ಚಾಲು ಮಾಡುತ್ತೀರಿ ಮತ್ತು ಅಲ್ಲಿಗೆ ಚುನಾವಣೆಯನ್ನು ಯಾವಾಗ ಮಾಡುತ್ತೀರಿ ಎಂಬುದರ ಬಗ್ಗೆ ಹೇಳಬೇಕು.

ಶ್ರೀ ಸುಭಾಷ್ ಗುತ್ತೇದಾರ್: ಈಗಾಗಲೇ ಪತ್ರಿಕೆಯಲ್ಲಿ ಡಿಸೆಂಬರ್ 15 ರೊಳಗೆ ಚುನಾವಣೆಯನ್ನು ಮಾಡಲಾಗುವುದು ಎಂದು ವರದಿ ಬಂದಿದೆ. ಆ ಪ್ರಕಾರ ಡಿಸೆಂಬರ್ 15 ರೊಳಗೆ ಚುನಾವಣೆಯನ್ನು ಮಾಡುತ್ತೀರೋ ಅಥವಾ ಇಲ್ಲವೋ ಎಂಬುದನ್ನು ಹೇಳಿ.

ಅಧ್ಯಕ್ಷರು: ಮಾಡುತ್ತೇವೆಂದು ಹೇಳಿದ್ದಾರಲ್ಲ.

ಶ್ರೀ ಡಿ.ಕೆ. ಶಿವಕುಮಾರ್ (ಮಾನ್ಯ ಸಹಕಾರ ಸಚಿವರು): ಅಲ್ಲಿ ಚುನಾವಣೆ ನಡೆಸಬೇಕು ಎನ್ನುವ ವಿಚಾರಕ್ಕೆ ಸಂಬಂಧಪಟ್ಟಂತೆ ಪ್ರತಿಯೊಂದು ವಿಚಾರವು ಮಾನ್ಯ ಮಾಲೀಕಯ್ಯ ಗುತ್ತೇದಾರ್‌ರವರಿಗೆ ಗೊತ್ತಿದೆ. ಚುನಾವಣೆ ಮಾಡುವುದಕ್ಕೆ ಈ ಕಾನೂನು ಬಂದಕೂಡಲೇ ಚುನಾವಣೆ ಮಾಡುವ ಪ್ರಕ್ರಿಯೆ ಪ್ರಾರಂಭವಾಯಿತು. ಚುನಾವಣೆ ಕೂಡ ಪ್ರಾರಂಭವಾಯಿತು. ಚುನಾವಣೆ ನಡೆಯುತ್ತಿರುವಾಗ ಲಾರಿಗಳಲ್ಲಿ, ಟ್ರಕ್‌ಗಳಲ್ಲಿ, ಬಸ್‌ಗಳಲ್ಲಿ ಇದ್ದಕ್ಕಿದ್ದ ಹಾಗೆ ಜನಗಳು ಬಂದಿಳಿದರು. ಅವರು ಯಾವ ಮೆಂಬರೋ, ಮತದಾರರೋ ಅಥವಾ ಯಾವ ಊರಿನವರೋ ಗೊತ್ತಿಲ್ಲ, ಅವರೇನು ಗುಲ್ಬರ್ಗಾದವರೋ, ಹೈದ್ರಾಬಾದ್‌ನವರೋ ಒಟ್ಟಿನಲ್ಲಿ ಎಲ್ಲೆಲ್ಲಿಂದಲೋ ಜನಗಳು ಬಂದು ಆ ದಿನ ಅಲ್ಲಿ ದೊಂಬಿ ಗಲಾಟೆ ಆಗಿ ಚುನಾವಣೆ ನಿಂತು ಹೋಯಿತು.

ಶ್ರೀ ಮಾಲೀಕಯ್ಯ ಏ. ಗುತ್ತೇದಾರ್: ಆ ರೀತಿ ಗಲಾಟೆ ಅಲ್ಲಿ ಆಗಿಲ್ಲ. ನೀವು ಸುಮ್ಮನೆ ಹೇಳಬೇಡಿ. ರೆಕಾರ್ಡ್ ತೆಗೆಸಿ ನೋಡಿ. ಅಲ್ಲಿಗೆ ಹೈದ್ರಾಬಾದಿನ ಜನ ಬಂದಿದ್ದಾರೇನು? ನೀವು ಬೇಕಾದರೆ ಅದರ ಬಗ್ಗೆ ತನಿಖೆ ಮಾಡಿಸಿ. ನಾವು ತಯಾರಿದ್ದೇವೆ. ನಿಜವಾಗಿಯೂ ಹಿಂದು ಅಲ್ಲಿಗೆ ಮತದಾರರೇ ಬಂದಿದ್ದು. ಆದುದರಿಂದ ನೀವು ಸದನದಲ್ಲಿ ತಪ್ಪು ಮಾಹಿತಿಯನ್ನು ಕೊಡಬೇಡಿ. ನಿಮ್ಮ ಪ್ರಶ್ನೆ, ಅಲ್ಲಿ ಮೊದಲು ಕಾರ್ಖಾನೆ ಪ್ರಾರಂಭವಾಗಬೇಕೆನ್ನುವುದೇ ನಮ್ಮ ಉದ್ದೇಶವಾಗಿದೆ.

ಶ್ರೀ ಡಿ.ಕೆ. ಶಿವಕುಮಾರ್: ಚುನಾವಣೆಯನ್ನಂತೂ ಖಂಡಿತ ನಾವು ಮಾಡುತ್ತೇವೆ. ಆದರೆ ಯಾವಾಗ ಮಾಡುತ್ತೇವೆ ಎಂಬುದನ್ನು ಸಧ್ಯದಲ್ಲಿಯೇ ನಿಮಗೆ ತಿಳಿಸುತ್ತೇವೆ. ಅಲ್ಲಿ ಕಳೆದ 9 ವರ್ಷಗಳಿಂದಲೂ ಕಾರ್ಖಾನೆ ಪ್ರಾರಂಭವಾಗಿಲ್ಲ. ಈಗ ದಿಢೀರನೇ ಪ್ರಾರಂಭ ಮಾಡಬೇಕೆನ್ನುತ್ತಿದ್ದಾರೆ.

ಶ್ರೀ ಉಮೇಶ್ ಕತ್ತಿ: ಮಾನ್ಯ ಅಧ್ಯಕ್ಷರೆ, ಯಾವುದೇ ಒಂದು ಕಾರ್ಖಾನೆ ಸಿಸನ್‌ನಲ್ಲಿ ಪ್ರಾರಂಭವಾಗದಿದ್ದರೆ ರೈತರುಗಳಿಗೆ ಕಷ್ಟವಾಗುತ್ತದೆ. ಬೀದರ್ ಹಾಗೂ ಗುಲ್ಬರ್ಗಾಕ್ಕೆ ಎರಡೇ ಸಕ್ಕರೆ ಕಾರ್ಖಾನೆಗಳಿರುವುದು. ಆಳಂದದಲ್ಲಿ ಸಕ್ಕರೆ ಕಾರ್ಖಾನೆ ಪ್ರಾರಂಭವಾಗದಿದ್ದರೆ ರೈತರು ಬೆಳೆದಿರುವ ಕಬ್ಬನ್ನು ಬೇರೆ ರಾಜ್ಯಕ್ಕೆ ಕಳುಹಿಸುವುದಕ್ಕೆ ಆಗುವುದಿಲ್ಲ. ಅವರು ಬಿತ್ತಿರುವ ಕಬ್ಬನ್ನು ಹಾಗೆಯೇ ಇಟ್ಟುಕೊಳ್ಳಲು ಆಗುವುದಿಲ್ಲ. ಆದರೆ ಇಲ್ಲಿರುವ ಕಾರ್ಖಾನೆ ಪ್ರಾರಂಭವಾಗುವುದಕ್ಕೆ ಹಣಕಾಸಿನ ತೊಂದರೆ ಇದೆ. ಅದನ್ನು ಮೊದಲು ಯಾವಾಗ ಸರಿ ಮಾಡುತ್ತಾರೆ ಎಂಬ ಬಗ್ಗೆ ಕೂಡ ಹೇಳಬೇಕು. ಕಾರ್ಖಾನೆಯನ್ನು ಯಾವಾಗ ಪ್ರಾರಂಭ ಮಾಡುತ್ತಾರೆ ಎಂಬ ಬಗ್ಗೆ ಕೂಡ ಹೇಳಬೇಕು. ಏಕೆಂದರೆ ಈಗಾಗಲೇ ಕಬ್ಬಿನ ಸೀಸನ್ ಪ್ರಾರಂಭವಾಗಿದೆ. ಕಾರ್ಖಾನೆ ಪ್ರಾರಂಭವಾಗದಿದ್ದರೆ ರೈತರು ಬೀದಿ ಪಾಲಾಗುತ್ತಾರೆ. ಈಗಾಗಲೇ ಅಲ್ಲಿ ಸುಮಾರು ಎರಡೂವರೆ ಲಕ್ಷ ಟನ್ ಕಬ್ಬನ್ನು ಬೆಳೆಯಲಾಗಿದೆ. ಈ ಕಬ್ಬನ್ನು ರೈತರು ಮಹಾರಾಷ್ಟ್ರಕ್ಕಾಗಲಿ ಅಥವಾ ಹೈದ್ರಾಬಾದ್‌ಗಾಗಲಿ ಕಳುಹಿಸುವುದಕ್ಕೆ ಆಗುವುದಿಲ್ಲ. ಅವರು ಇಲ್ಲಿರುವ ಕಾರ್ಖಾನೆಗೆ ಇದನ್ನು ಕಳುಹಿಸಬೇಕಾಗಿದೆ. ಆದರೆ ಈ ಕಾರ್ಖಾನೆಯನ್ನು ಪ್ರಾರಂಭ ಮಾಡಲು ಹಣಕಾಸಿನ ತೊಂದರೆ ಇದೆ. ಹಣಕಾಸಿನ ವ್ಯವಸ್ಥೆಯನ್ನು ಸರಿಯಾಗಿ ಮಾಡದೇ ಆ ಕಾರ್ಖಾನೆಯನ್ನು ಪ್ರಾರಂಭ ಮಾಡುವುದಕ್ಕೆ ಸಾಧ್ಯವಿಲ್ಲವಾಗಿದೆ. ಏಕೆಂದರೆ ನಮಗೂ ಎರಡು ವರ್ಷ ಸಕ್ಕರೆ ಕಾರ್ಖಾನೆಯನ್ನು ನಡೆಸಿದ ಅನುಭವ ಇದೆ. ಆ ಕಾರಣದಿಂದಲೇ ನಾನು ಹೇಳುತ್ತಿದ್ದೇನೆ, ಮೊದಲು ಅಲ್ಲಿಗೆ ಸರಿಯಾಗಿ ಹಣಕಾಸಿನ ವ್ಯವಸ್ಥೆಯನ್ನು ಮಾಡಬೇಕು, ಇದನ್ನು ಮಾಡಿ ಕಾರ್ಖಾನೆಯನ್ನು ಯಾವಾಗ ಪ್ರಾರಂಭ ಮಾಡುತ್ತಾರೆ ಎಂಬ ಬಗ್ಗೆ ಹೇಳಬೇಕು.

ಶ್ರೀ ಡಿ.ಕೆ. ಶಿವಕುಮಾರ್ (ಮಾನ್ಯ ಸಹಕಾರ ಸಚಿವರು): ಡಿಸೆಂಬರ್ ಮೊದಲನೇ ವಾರದಲ್ಲಿ ಕಾರ್ಖಾನೆ ಪ್ರಾರಂಭವಾಗುವುದಕ್ಕೆ ಎಲ್ಲಾ ಕ್ರಮಗಳನ್ನೂ ಕೈಗೊಳ್ಳುತ್ತೇವೆ. ಚುನಾವಣೆಯನ್ನು ಆದಷ್ಟು ಬೇಗನೇ ಮಾಡುತ್ತೇವೆ.

ಶ್ರೀ ಸುಭಾಷ್ ಗುತ್ತೇದಾರ್: ಚುನಾವಣೆಯನ್ನು ನಿರ್ದಿಷ್ಟವಾಗಿ ಯಾವಾಗ ಮಾಡುತ್ತೀರಿ ಎಂಬ ಬಗ್ಗೆ ಹೇಳಿ.

ಅಧ್ಯಕ್ಷರು: ಈ ಚುನಾವಣೆ ಬಗ್ಗೆ ಸಾಕಷ್ಟು ಚರ್ಚೆ ಈಗಾಗಲೇ ಆಗಿದೆ. ಮಾನ್ಯ ಮಂತ್ರಿಗಳು ಆದಷ್ಟು ಬೇಗನೆ ಚುನಾವಣೆಯನ್ನು ಮಾಡುತ್ತೇವೆಂದು ಹೇಳಿದ್ದಾರೆ. ತಕ್ಷಣದಲ್ಲಿಯೇ ಚುನಾವಣೆ ಮಾಡುವುದಕ್ಕೆ ಅವರಿಗೆ ಏನೊ ಟೆಕ್ನಿಕಲ್ ಡಿಫಿಕಲ್ಟೀಸ್ ಇರಬಹುದು. ಆದರೂ ಆದಷ್ಟು ಬೇಗನೇ ಚುನಾವಣೆ ಮಾಡುತ್ತೇವೆಂದು ಹೇಳಿದ್ದಾರಲ್ಲ.

ಶ್ರೀ ಸುಭಾಷ್ ಗುತ್ತೇದಾರ್: ಡಿಸೆಂಬರ್ 15 ನೇ ತಾರೀಖಿನೊಳಗೆ ಚುನಾವಣೆ ಮಾಡಲಾಗುವುದೆಂದು ಪತ್ರಿಕೆಯಲ್ಲಿ ವರದಿ ಬಂದಿದೆ. ಹೀಗಿದ್ದರೂ ಕೂಡ ಸರ್ಕಾರ ಈ ಬಗ್ಗೆ ಸ್ಪಷ್ಟವಾಗಿ ದಿನಾಂಕವನ್ನು ಹೇಳದಿರುವುದರಿಂದ ನಾನು ಧರಣಿ ಮಾಡುತ್ತೇನೆ.

(ಈ ಹಂತದಲ್ಲಿ ಸುಭಾಷ್ ಗುತ್ತೇದಾರ್‌ರವರು ಬಾವಿಗೆ ಬಂದರು)

ಶ್ರೀ ಮಾಲೀಕಯ್ಯ ಏ. ಗುತ್ತೇದಾರ್: ಮಾನ್ಯ ಅಧ್ಯಕ್ಷರೆ, ಈಗಾಗಲೇ ಹಿಂದಿನ ಸರ್ಕಾರದಲ್ಲಿ ಸಕ್ಕರೆ ಖಾತೆ ಸಚಿವರಾಗಿದ್ದ ಶ್ರೀ ಉಮೇಶ್‌ಕತ್ತಿಯವರು ಹೇಳಿದ ಹಾಗೆ ಅಲ್ಲಿ ಈ ಕಾರ್ಖಾನೆ ಪ್ರಾರಂಭವಾಗದಿದ್ದರೆ ರೈತರು ಬೆಳೆದ ಕಬ್ಬನ್ನು ಬೇರೆ ಕಡೆಗೆ ಸಾಗಿಸುವುದಕ್ಕೆ ಆಗುವುದಿಲ್ಲ. ರೈತರು ಇದರಿಂದ ತೊಂದರೆಗೊಳಗಾಗುತ್ತಾರೆ. ಈಗಾಗಲೇ ಅಲ್ಲಿ ಕಾರ್ಖಾನೆ ಪ್ರಾರಂಭವಾಗಬೇಕಾಗಿತ್ತು. ಆದರೂ ಇನ್ನೂ ಅದರ ಬಗ್ಗೆ ಸರ್ಕಾರ ಕಾರ್ಯಕ್ರಮ ರೂಪಿಸಿಲ್ಲ. ಜಿಲ್ಲಾಧಿಕಾರಿಗಳ ನೇತೃತ್ವದಲ್ಲಾದರೂ ಅಲ್ಲಿ ಕಾರ್ಖಾನೆ ಪ್ರಾರಂಭವಾಗಿದ್ದರೆ ನಾವು ಇಂದು ಗಲಾಟೆಯನ್ನೇ ಮಾಡುತ್ತಿರಲಿಲ್ಲ. ಅದನ್ನೂ ಕೂಡ ಮಾಡಿಲ್ಲ. ಅಲ್ಲಿಗೆ ಚುನಾವಣೆ ಮಾಡುತ್ತೇವೆಂದು ಕೂಡ ಸರ್ಕಾರ ಘೋಷಣೆಯನ್ನು ಮಾಡಿಲ್ಲ.

ಶ್ರೀ ಡಿ.ಕೆ. ಶಿವಕುಮಾರ್ (ಸಹಕಾರ ಸಚಿವರು): ಕಳೆದ 9 ವರ್ಷದಿಂದ ಆ ಸಕ್ಕರೆ ಕಾರ್ಖಾನೆ ಪ್ರಾರಂಭವಾಗಿರಲಿಲ್ಲ. ಆದರೆ ಈಗಿಂದೀಗಲೇ ಪ್ರಾರಂಭ ಆಗಬೇಕೆಂದು ಹೇಳಿದರೆ ಏನರ್ಥ? 9 ವರ್ಷದಿಂದ ಅಲ್ಲಿ ಕಾರ್ಖಾನೆ ನಡೆದಿಲ್ಲ.

ಅಧ್ಯಕ್ಷರು: ಮಾನ್ಯ ಸುಭಾಷ್ ಗುತ್ತೇದಾರ್‌ರವರೆ, ಈಗ ಮಾನ್ಯ ಸಭಾನಾಯಕರು ಮಾತನಾಡುತ್ತಾರೆ. ನೀವು ನಿಮ್ಮ ಜಾಗಕ್ಕೆ ಹೋಗಿ.

(ಅಧ್ಯಕ್ಷರ ಆದೇಶದನ್ವಯ ಶ್ರೀ ಸುಭಾಷ್ ಗುತ್ತೇದಾರ್‌ರವರು ತಮ್ಮ ಸ್ಥಳಕ್ಕೆ ಹೋದರು).

ಶ್ರೀ ಎಸ್.ಎಂ. ಕೃಷ್ಣ (ಮಾನ್ಯ ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೆ, ಅಲ್ಲಿ ಆ ಕಾರ್ಖಾನೆ ಕಳೆದ 9 ವರ್ಷಗಳಿಂದ ಪ್ರಾರಂಭವಾಗದೆ ಜಿಜ್ಞಾಸೆಯಲ್ಲಿರತಕ್ಕಂಥ ಪ್ರಕ್ರಿಯೆಯಾಗಿದೆ. ಈಗ ಮಾನ್ಯ ಸಚಿವರು ಈಗಾಗಲೇ ಮಾತನಾಡಿ ಅಲ್ಲಿ ಚುನಾವಣೆ ಮಾಡುವುದಕ್ಕೆ ಸೂಕ್ತವಾದ ವ್ಯವಸ್ಥೆಯನ್ನು ಮಾಡುತ್ತೇವೆಂದು ಹೇಳಿದ್ದಾರೆ. ಆದುದರಿಂದ ಆ ಭರವಸೆಯನ್ನು ಗಮನಿಸಿಕೊಂಡು ಮಾನ್ಯ ಸದಸ್ಯರುಗಳು ಸರ್ಕಾರದ ಜೊತೆ ಸಹಕಾರ ಕೊಟ್ಟರೆ ಅಲ್ಲಿ ಸೌಹಾರ್ದಯುತವಾಗಿ ಮತ್ತು ಪ್ರಜಾಸತ್ತಾತ್ಮಕವಾದಂಥ ಚುನಾವಣೆಯನ್ನು ನಾವು ನಡೆಸುತ್ತೇವೆ.

ಅಧ್ಯಕ್ಷರು: ಆಯಿತು. ಈಗ ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ. ಮೊದಲು ಮಾನ್ಯ ಹೆಚ್.ಎಸ್. ಶಂಕರಲಿಂಗೇಗೌಡರು ಮಾತನಾಡಬೇಕು.